PCR 4/2023
PW.2

**3ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಬೆಳಗಾವಿ**

**ಇವರ ನ್ಯಾಯಾಲಯದಲ್ಲಿ, ಬೆಳಗಾವಿ.**

| | |
|---|---|
| ಸಾಕ್ಷಿಯ ಹೆಸರು | : ಶ್ರೀ ರಮೇಶ ಪ್ರಕಾಶ ಅಕುಲಕರ |
| ತಂದೆಯ ಹೆಸರು | : ಶ್ರೀ ಪ್ರಕಾಶ ಅಕುಲಕರ |
| ವಯಸ್ಸು | : 28 ವರ್ಷ |
| ಉದ್ಯೋಗ | : ಅತಿಥಿ ಶಿಕ್ಷಕರು, ಸರ್ಕಾರಿ ಪ್ರಾಥಮಿಕ ಶಾಲೆ ಅಮಟೆ, ತಾಃಖಾನಾಪೂರ |
| ವಾಸ್ತವ್ಯ | : ಖಾನಾಪೂರ |
| ದಿನಾಂಕ | : 30-01-2025 ರಂದು ಸಾಕ್ಷೀದಾರರನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು. |

**ಕಲಂ 200 ಸಿ.ಆರ್.ಪಿ.ಸಿ ಅಡಿ ಸ್ವಪ್ರಮಾಣೀಕೃತ ಹೇಳಿಕೆ**

ಈ ಪ್ರಕರಣದ ಪಿರ್ಯಾದಿ ಪ್ರಕಾಶ ವಡ್ಡರ ನನ್ನ ತಂದೆ ಆಗಬೇಕು. ನನ್ನ ತಂದೆ ಮರಾಠಿ ಹಿರಿಯ ಪ್ರಾಥಮಿಕ ಶಾಲೆ ಅಮಟೆಯಲ್ಲಿ ಮುಖ್ಯ ಶಿಕ್ಷಕರಾಗಿ ಕಳೆದ ಎರಡು ವರ್ಷಗಳಿಂದ ಕರ್ತವ್ಯ ನಿರ್ವಹಿಸುತ್ತಿದ್ದಾರೆ. ನಮ್ಮದು ಹಿಂದೂ ಬೋವಿ ವಡ್ಡರ ಜಾತಿಯಾಗಿರುತ್ತದೆ. ನನ್ನ ತಂದೆ ತಾಯಿಗೆ ಒಟ್ಟು ಇಬ್ಬರು ಮಕ್ಕಳಿದ್ದು ಅದರಲ್ಲಿ ನಾನು ಮತ್ತು ನನ್ನ ತಂಗಿ ಇದ್ದು ಆಕೆಯ ಹೆಸರು ಶೃತಿ. ನಾವು ಸಧ್ಯ ನಿಂಗಾಪೂರ ಓಣಿ, ಖಾನಾಪೂರದಲ್ಲಿ ನನ್ನ ತಂದೆ ತಾಯಿಯೊಂದಿಗೆ ವಾಸಮಾಡುತ್ತಿದ್ದೇವೆ. ನನಗೆ ಕನ್ನಡ ಓದಲು ಬರೆಯಲು ಬರುತ್ತದೆ.

2. ಪ್ರಕಾಶ ಶಿವಮೂರ್ತಿ ಹೊಸಮನಿ ಇವರು ಖಾನಾಪೂರದಲ್ಲಿರುವ ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಛೇರಿಯಲ್ಲಿ ವ್ಯವಸ್ಥಾಪಕರೆಂದು ಕರ್ತವ್ಯ ನಿರ್ವಹಿಸುತ್ತಿರುತ್ತಾರೆ. ನನ್ನ ತಂದೆಯ ಕಛೇರಿಯ ಕೆಲಸ ಇದ್ದಾಗ ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಛೇರಿಗೆ ನಾನು ಹೋಗಿ ಬರುವುದನ್ನು ಮಾಡುತ್ತಿರುತ್ತೇನೆ. ದಿಃ19.04.2022 ರಂದು ಪ್ರಕಾಶ ಶಿವಮೂರ್ತಿ ಹೊಸಮನಿ ಇವರು ನನ್ನ ಮತ್ತು ನಮ್ಮ ತಂದೆಯ ವಿರುದ್ಧ ಖಾನಾಪೂರ ಪೋಲಿಸ ಠಾಣೆಯಲ್ಲಿ ದೂರನ್ನು ದಾಖಲು ಮಾಡಿರುತ್ತಾರೆ. ಸದರಿಯವರು ಸಲ್ಲಿಸಿದ ದೂರಿನಲ್ಲಿ ನಾನು ಮತ್ತು ನನ್ನ ತಂದೆ ಮಾತ್ರ ಆರೋಪಿತರು ಇರುತ್ತೇವೆ

ಎಂದರೆ ಸರಿ. ಅದರ ಸಿಸಿ ನಂಬರ 944/2022 ರಂತೆ ದಾಖಲಾಗಿದ್ದು ಸದರಿ ಪ್ರಕರಣವು ಪ್ರಧಾನ ದಿವಾಣಿ ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು ನ್ಯಾಯಾಲಯ, ಖಾನಾಪೂರದಲ್ಲಿ ವಿಚಾರಣೆ ನಡೆಯುತ್ತಿದೆ.

3. ದಿಃ 19.04.2022 ರಂದು ನಾನು ಮತ್ತು ನನ್ನ ತಂದೆ ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಛೇರಿ, ಖಾನಾಪೂರಗೆ ನನ್ನ ತಂದೆಯ ಪೇ ಸ್ಲಿಪ್‌ನ್ನು ತೆಗೆದುಕೊಂಡು ಬರಲು ವ್ಯವಸ್ಥಾಪಕರ ಕಛೇರಿಗೆ ಮುಂಜಾನೆ 10.00 ಗಂಟೆಗೆ ಹೋಗಿದ್ದೇವು. ಸದರಿ ವ್ಯವಸ್ಥಾಪಕರ ಕಛೇರಿಗೆ ಬಂದಿದ್ದು ಅವರನ್ನು ನಾವು ಭೇಟಿಯಾಗಿದ್ದು ಆಗ ನಮ್ಮ ತಂದೆಯವರು ಸದರಿಯವರಿಗೆ ನನ್ನ ಮಗನ ಶಸ್ತ್ರ ಚಿಕಿತ್ಸೆಗೆ ಹಣದ ಅವಶ್ಯಕತೆ ಇದೆ ಆದ ಕಾರಣ ಬೇಗ ಪೇ ಸ್ಲಿಪ್‌ನ್ನು ಕೊಡಿ ಅಂತಾ ಕೇಳಿದೇವು, ಆಗ ಸದರಿಯವರು ನೀವು ಕಛೇರಿಯಲ್ಲಿರುವ ಸಿಬ್ಬಂದಿಯಾದಂತಹ ರಾಜಾರಾಮ ಗಣಪತಿ ಚಿಗುಲಕರವರನ್ನು ಭೇಟಿಯಾಗಿ ಅರ್ಜಿಯನ್ನು ನೀಡಿ ನಾನು ನಂತರ ನೋಡುತ್ತೇನೆ ಅಂತಾ ಹೇಳಿದರು. ನಂತರ ನಾವು ಅರ್ಜಿಯನ್ನು ಕಛೇರಿಯಲ್ಲಿರುವ ಸಿಬ್ಬಂದಿಯವರ ಹತ್ತಿರ ನೀಡಿದ್ದು ತದನಂತರ ಅದೇ ದಿನ ಮುಂಜಾನೆ 11.00 ರಿಂದ 11.30 ಗಂಟೆಗೆ ಕಛೇರಿ ವ್ಯವಸ್ಥಾಪಕರಾದಂತಹ ಪ್ರಕಾಶ ಹೊಸಮನಿಯವರನ್ನು ಭೇಟಿಯಾಗಿ ಅರ್ಜಿ ನೀಡಿದ ವಿಷಯವನ್ನು ತಿಳಿಸಿದ್ದು, ಆಗ ಅವರು ನೀವು ರೂ.2,000/- ಹಣವನ್ನು ನೀಡಿದ್ದಲ್ಲಿ ನಿಮ್ಮ ಕೆಲಸವನ್ನು ಬೇಗ ಮಾಡಿಕೊಡುತ್ತೇವೆ ಅಂತಾ ಹೇಳಿದರು, ಆಗ ನಾವು ಅವರಿಗೆ ಈಗ ನಮ್ಮ ಹತ್ತಿರ ಹಣ ಇರುವುದಿಲ್ಲ ತದನಂತರ ಕೊಡುತ್ತೇವೆ ನೀವು ನಮ್ಮ ಕೆಲಸವನ್ನು ಮಾಡಿಕೊಡಿ ಅಂತಾ ಕೇಳಿದೇವು, ಆಗ ಅವರು ಏನು ಮಾತನಾಡದೇ ಕಛೇರಿಯಿಂದ ವಾಹನ ನಿಲುಗಡೆ ಮಾಡುವ ಸ್ಥಳಕ್ಕೆ ಹೋದರು.

4. ಆಗ ನಾನು ಮತ್ತು ನನ್ನ ತಂದೆ ಅವರ ಹಿಂದೆ ಸದರಿ ನಿಂತ ಸ್ಥಳಕ್ಕೆ ಹೋದೇವು. ಸದರಿ ಸ್ಥಳದಲ್ಲಿ ನಮ್ಮ ಮೂರು ಜನರನ್ನು ಹೊರತುಪಡಿಸಿ ಬೇರೆ ಯಾರೂ ಅಲ್ಲಿ ಇರಲಿಲ್ಲ. ಆಗ ಅವರ ಹತ್ತಿರ ಹೋಗಿ ನಮಗೆ ಹಣದ ಅವಶ್ಯಕತೆ ಇದೆ ಬಹಳ ತುರ್ತಾಗಿ ಪೇ ಸ್ಲಿಪ್‌ನ್ನು ಕೊಡಿ ಅಂತಾ ಕೇಳಿದಾಗ ಸದರಿಯವರು ಸಿಟ್ಟಾಗಿ ನಮ್ಮ ತಂದೆಗೆ ವಡ್ಡರ ಬೋಸಡಿ ಮಗನೇ ಅಂತಾ ಬೈದರು, ಅದೇ ರೀತಿ ನಿಮ್ಮ ಬಿಲ್ ನ್ನು ಪಾಸು ಮಾಡುವುದಿಲ್ಲ ಮತ್ತು ನಿಮ್ಮನ್ನು ಬಿಡುವುದಿಲ್ಲ ಅಂತಾ ಧಮಕಿ

ಹಾಕಿರುತ್ತಾರೆ.  ಅದೇ ದಿನ ಪ್ರಕಾಶ ಹೊಸಮನಿ ಇವರು ಖಾನಾಪೂರ ಪೋಲಿಸ ಠಾಣೆಗೆ ಹೋಗಿ ನಾನು ಮತ್ತು ನನ್ನ ತಂದೆ ಸೇರಿ ಅವರಿಗೆ ಅವಾಚ್ಯ ಶಬ್ದಗಳಿಂದ ಬೈದು ಅವರ ಅಂಗಿ ಹಿಡಿದು ಎಳೆದಾಡಿ ನಾವು ಅವರ ಮೇಲೆ ಹಲ್ಲೆ ಮಾಡಿರುವುದಾಗಿ ದೂರು ನೀಡಿದ್ದು ಗೊತ್ತಾಯಿತು.

ಈ ಹಂತದಲ್ಲಿ ಮುಂದುವರೆದ ಸ್ವಪ್ರಮಾಣೀಕೃತ ಹೇಳಿಕೆಯನ್ನು ಮಾಡಿಸಲು ಸಮಯಾವಕಾಶ ಕೇಳಿದ್ದು, ಸಮಯಾವಕಾಶ ನೀಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ಗಣಕ ಯಂತ್ರದ ಮುಖಾಂತರ ಪಡೆದುಕೊಳ್ಳಲಾಯಿತು).

ಓ.ಹೇ.ಕೇ.ಸರಿ ಅದೆ.

(ಚೆನ್ನಪ್ಪ ಗೌಡ)
3ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಬೆಳಗಾವಿ.